

ಧನ ತ್ಯಾಗ ದೊಡ್ಡದೇನೂ ಆಗಿರಲಿಲ್ಲ. ಬಸ್ಸಿನಲ್ಲಿ, ರಶ್‌ನಲ್ಲಿ ಪ್ರಯಾಣ ಮಾಡುತ್ತಾ ಒದ್ದಾಡುವುದಕ್ಕಿಂತ ಈ ತ್ಯಾಗ ಸುಲಭವೆನಿಸಿತ್ತು.

ಮೇಲಾಗಿ, ಸಿಬ್ಬಂದಿ ವರ್ಗದಲ್ಲಿ ಕೆಲವರಿಗೆ ಆಗಾಗ ಒಂದಷ್ಟು ನೋಟುಗಳನ್ನು ಕೊಟ್ಟು ಸಮಾಧಾನದಿಂದ ಇಟ್ಟುಕೊಂಡಿದ್ದರಿಂದ ಯಾವ ಮೇಲಧಿಕಾರಿಗಳ ಭೇಟಿಯಿದ್ದರೂ ತನಿಖೆಯಿದ್ದರೂ ಅವರಿಗೇ ಅವರ ಭೇಟಿಯ ಸಮಯ ತಿಳಿಯುವುದಕ್ಕಿಂತ ಭ್ರಮರಳಿಗೆ ಮೊದಲು ತಿಳಿದುಹೋಗುತ್ತಿತ್ತು. ಹಾಗಾಗಿ, ಯಾರೇ ದಿಢೀರ್ ಭೇಟಿಯಿತ್ತರೂ ಅವರು ಬರುವುದಕ್ಕಿಂತ ಅರ್ಧ ಗಂಟೆ ಮುಂಚೆ ಕಾಲೇಜಿನಲ್ಲಿ ಹಾಜರಾಗಿರುತ್ತಿದ್ದಳು. ಬೆಳಗ್ಗೆ ಎಂಟರಿಂದ ಒಂದೇ ಸಮನೆ ದುಡಿದು ಮೂರಕ್ಕೆ ಮನೆಗೆ ಹೋದ ಬಡಪಾಯಿಗಳು ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗುತ್ತಿದ್ದರೇ ಹೊರತು ಭ್ರಮರಳಲ್ಲ. ಇದಲ್ಲದೇ, ಮೇಲಧಿಕಾರಿಗಳ ಮಕ್ಕಳ ಮದುವೆ, ಅವರ ಮನೆಯ ನಾಯಿಯ ಜನ್ಮದಿನವನ್ನೂ ನೆನಪಿನಲ್ಲಿಟ್ಟುಕೊಂಡು, ಬೆಲೆಬಾಳುವ ಉಡುಗೊರೆಗಳನ್ನು ತಲುಪಿಸಿ ಎಲ್ಲರನ್ನೂ ತಣ್ಣಗೆ ಇಟ್ಟುಕೊಳ್ಳುತ್ತಿದ್ದಳು. ಸಭೆ ಸಮಾರಂಭಗಳಲ್ಲಿ, ಕಾರ್ಯಕ್ರಮ ಆರಂಭವಾಗುವ ಐದು ನಿಮಿಷ ಮುಂಚೆ ಸೊಗಸಾದ ರೇಷ್ಮೆ ಸೀರೆ ಧರಿಸಿಕೊಂಡು ಬಂದು ಬೆಳಗಿನಿಂದ ವೇದಿಕೆಯ ಅಲಂಕಾರ, ಅದೂ ಇದೂ ಎಂದು ಓಡಾಡಿದ ಎಲ್ಲರನ್ನೂ ಒತ್ತರಿಸಿ, ಅತಿಥಿಗಳ ಪಕ್ಕ ನಿಂತು ಎಲ್ಲಾ ಫೋಟೊಗಳಲ್ಲೂ ಕಾಣಿಸಿಕೊಳ್ಳುವುದು, ಹೀಗೆ ಮಾಡಿ, ಹಾಗೆ ಮಾಡಿ ಎಂದು ಒಗ್ಗರಣೆ ಹಾಕುವುದು, ಇವೆಲ್ಲವೂ ನೀರು ಕುಡಿದಷ್ಟೇ ಸುಲಭದ ವಿಚಾರಗಳಾಗಿದ್ದವು ಭ್ರಮರಳಿಗೆ. ಇನ್ನು, ಭ್ರಮರಳ ಮೌಲ್ಯಮಾಪನ ಕಾರ್ಯವಂತು ಯಾವ ಜಾದೂಗಾರನ ಮೋಡಿಯನ್ನೂ ಮೀರಿದ್ದು! ಪೇಪರ್ ಬಂಡಲನ್ನು ಹಾಗೂ ಹೀಗೂ ತಿರುಗಿಸಿ, ಯಾರೂ ಕಂಡುಹಿಡಿಯಲಾಗದ ತಂತ್ರಗಳನ್ನು ಬಳಸಿ ಒಂದೇ ಗಂಟೆಯಲ್ಲಿ ಎಲ್ಲವನ್ನೂ ಮುಗಿಸಿ, ಮಾಯವಾಗುವ ಅವಳ ಚಾತುರ್ಯ ಯಾರಿಗೂ ಬಾರದು.

ಇಂತಹ ನೆಮ್ಮದಿಯ ಜೀವನಕ್ಕೆ ಬೀನಾರಾಣಿಯ ಒಂದು ತೆಲುನಗೆ ಕೊಳ್ಳಿಯಿಟ್ಟದ್ದು ಹೇಗೆ? ಬೀನಾರಾಣಿಗೆ ಎಲ್ಲಾ ಎಂಟು ಘಂಟೆಯ ಹಾಗೂ ಎರಡರ ಅನಂತರದ ತರಗತಿಗಳನ್ನು ನೀಡಿ ಮನೆ ಸೇರಿದರೂ ನೆಮ್ಮದಿ ಎನಿಸುತ್ತಿರಲಿಲ್ಲ. ಚಿಕ್ಕಮಗುವನ್ನು ಇಟ್ಟುಕೊಂಡು, ದಿನವೂ ಎಂಟುಗಂಟೆಗೆ ಸರಿಯಾಗಿ ಬರಲಾರಳು. ಅವಳು ಕ್ಲಾಸ್ ತೆಗೆದುಕೊಳ್ಳದ ದಿನ ರೆಡ್‌ಹ್ಯಾಂಡ್ ಆಗಿ ಹಿಡಿದು, ಅವಳ ಮುಖದ ನಗೆ ಮಾಸುವಂತೆ ಮಾಡಬೇಕೆನ್ನುವುದು ಅವಳ ಕನಸಾದರೂ, ಅವಳ ಮೇಲೆ ಕಣ್ಣಿಡಲಾದರೂ ಎಂಟು ಗಂಟೆಗೆ ಹೋಗಬೇಕಲ್ಲ! ಬೆಳಗಿನ ಸಕ್ಕರೆ ನಿದ್ದೆ ಬಿಟ್ಟು ಹೋಗುವುದಾದರೂ ಹೇಗೆ? ಹೀಗಾಗಿ, ಅಟೆಂಡರ್ ಮಹದೇವನ ಕೈಲಿ ಎರಡು ನೋಟುಗಳನ್ನು ಇರಿಸಿ ಬೀನಾರಾಣಿಯ ತರಗತಿಗಳ ಮೇಲೆ ಕಣ್ಣಿಡುವಂತೆ ತಾಕೀತು ಮಾಡಿದ್ದಳು. ಪದೇಪದೇ ಅಟೆಂಡರ್ ತನ್ನ ತರಗತಿಯ ಸುತ್ತ ಸುತ್ತುವುದನ್ನು ಕಂಡು ಬೀನಾರಾಣಿ, ''ಮಹದೇವಾ, ಹೊರಗಡೆ ಯಾಕೆ ನಿಂತಿದ್ದೀಯ? ಒಳಗೆ ಬಾಪ್ಪ, ಎಸ್.ಎಸ್.ಎಲ್.ಸಿ ಕಟ್ಟೋದಾದ್ರೆ ನಾನು ಇಂಗ್ಲಿಷ್ ಹೇಳಿಕೊಡ್ತೀನಿ'' ಎಂದು ಕರೆದಾಗ, ಇವಳೆಲ್ಲಿ ಒಳಗೆ ಕರೆದು ಪಾಠ ಶುರುಮಾಡಿಬಿಡುವಳೋ ಎಂದು ಹೆದರಿ ''ಏನಿಲ್ಲ, ಏನಿಲ್ಲ'' ಎಂದು ಕಾಲುಕಿತ್ತಿದ್ದ. ಭ್ರಮರಳ ಮತ್ತೊಂದು ಕಿಲಾಡಿತನವೆಂದರೆ ಯಾರೂ ಬರೆದ ನೋಟ್ಸ್‌ಗಳನ್ನು ತನ್ನ ಕೈಬರಹದಲ್ಲಿ ಬರೆದು, ತಾನೇ ಬರೆದಂತೆ ಜೆರಾಕ್ಸ್ ಮಾಡಿ ಹಂಚಿಬಿಡುವುದು. ಆ ನೋಟ್ಸ್‌ಗಳನ್ನು ತಾನು ಹೇಗೆ ಕಷ್ಟಪಟ್ಟು ತಯಾರು ಮಾಡಿದೆ ಎಂದು ನಾಲ್ಕಾರು ದಿನ ಎಲ್ಲರ ಮುಂದೆ ಹೇಳಿಕೊಳ್ಳುತ್ತಿದ್ದಳು. ಗೊತ್ತಿಲ್ಲದವರು ಅವಳ ನೋಟ್ಸ್‌ಗಳ ಸ್ಟಾಂಡರ್ಡ್ ನೋಡಿ ಬೆರಗಾಗುತ್ತಿದ್ದರು. 25 ವರ್ಷಗಳಿಂದ ಈ ಕೆಲಸವೂ ನಿರಾತಂಕವಾಗಿ ನಡೆಯುತ್ತಿತ್ತು. ಈ ವಿಷಯದಲ್ಲೂ ಮುಖಭಂಗವಾಗುವ ಕೆಲಸವೊಂದು ನಡೆದೇಹೋಯಿತು. ಹುಡುಗಿಯೊಬ್ಬಳು ಭ್ರಮರ ಕೊಟ್ಟ ನೋಟ್ಸ್ ತಂದು, ಈ ಸಾಲುಗಳ ಅರ್ಥ ಆಗುತ್ತಿಲ್ಲ ಎಂದಾಗ ಭ್ರಮರಳ ಮೈ ಉರಿಯಿತು. ಅವಳು ಆ ನೋಟ್ಸ್‌ಗಳನ್ನು ತಯಾರಿ ಮಾಡಿಲ್ಲವಾದ್ದರಿಂದ ಆ ಭಾಗದಲ್ಲಿದ್ದ ಕೆಲವು ಪದಗಳ ಅರ್ಥ ಅವಳಿಗೆ ಗೊತ್ತಿರಲಿಲ್ಲ. ಇಲ್ಲಿ ಯಾರಿಗೆ ಇವೆಲ್ಲ ಗೊತ್ತಿರುತ್ತದೆ ಎನ್ನುವ ಧೈರ್ಯದಲ್ಲಿ ಆ ಹುಡುಗಿಗೆ ಏನೋ ತೋಚಿದಂತೆ ಹೇಳಿ ಕಳುಹಿಸಿದಳು. ಬಳಿಕ, ಮೂಲೆಯಲ್ಲಿ ಕುಳಿತು ಏನೋ ಓದುತ್ತಿದ್ದ ಬೀನಾರಾಣಿ ಅವಳ ಕಣ್ಣಿಗೆ ಬಿದ್ದು ಗಾಬರಿಯಾದಳು. ಬೀನಾರಾಣಿ ಒಮ್ಮೆ ತಲೆ ಎತ್ತಿ ನೋಡಿ ತನ್ನ ಪಾಡಿಗೆ ಓದಿನಲ್ಲಿ ಮಗ್ನಳಾದರೂ ಆ ಒಂದು ಕ್ಷಣದಲ್ಲಿ ಅವಳ ಮುಖದ ಮೇಲೆ ಕುಹಕದ ನಗೆಯೊಂದು ಹಾದು ಹೋದಂತೆ ಅವಳಿಗೆನಿಸಿತು. ತಾನು ತಪ್ಪುತಪ್ಪಾಗಿ ಹೇಳಿದ್ದನ್ನೇನಾದರೂ ಕೇಳಿಸಿಕೊಂಡಳೇ! ಅವಳ